# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1598** |
| **ಸದಸ್ಯರ ಹೆಸರು** | : | **ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | : | **21.03.2025** |
| **ಉತ್ತರಿಸುವವರು** | : | **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ಎಷ್ಟು ಪಂಚಾಯತ್ ಗಳಿಗೆ ಕಸ ಎತ್ತುವ ವಾಹನಗಳನ್ನು ಒದಗಿಸಲಾಗಿದೆ; ಎಷ್ಟು ಪಂಚಾಯತ್ ಗಳಿಗೆ ವಾಹನಗಳನ್ನು ಒದಗಿಸಲು ಬಾಕಿ ಇದೆ; ಯಾವಾಗ ಒದಗಿಸಲಾಗುವುದು; | ಸ್ವಚ್ಛ ಭಾರತ್ ಮಿಷನ್ (ಗ್ರಾ) ಹಂತ-1.0ರ ಅಡಿಯಲ್ಲಿ 4783 ಗ್ರಾಮ ಪಂಚಾಯಿತಿಗಳಿಗೆ ಸ್ವಚ್ಛ ವಾಹಿನಿಗಳನ್ನು ಒದಗಿಸಲಾಗಿದೆ. ಬಾಕಿ 1169 ಗ್ರಾಮ ಪಂಚಾಯಿತಿಗಳು ಬಹುಗ್ರಾಮ ಕ್ಲಸ್ಟರ್ ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಮೂಲ ಗ್ರಾಮ ಪಂಚಾಯಿತಿಗಳ ವಾಹನ ಬಳಸಿಕೊಂಡು ತ್ಯಾಜ್ಯ ಸಂಗ್ರಹಣೆ ಮಾಡಲಾಗುತ್ತಿದೆ.<br>ಸ್ವಚ್ಛ ಭಾರತ್ ಮಿಷನ್ (ಗ್ರಾ) ಹಂತ-2.0ರ ಅನುದಾನದೊಂದಿಗೆ ಇತರೆ ಸ್ಥಳೀಯ ಅನುದಾನ ಬಳಸಿಕೊಂಡು ಗ್ರಾಮ ಪಂಚಾಯಿತಿಗಳು ಸ್ವಚ್ಛ ವಾಹಿನಿ ಖರೀದಿಸಲು ಕ್ರಮವಹಿಸಲು ತಿಳಿಸಲಾಗಿದೆ. |
| (ಆ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ಘನ ತ್ಯಾಜ್ಯ ನಿರ್ವಹಣೆಗಾಗಿ ಎಷ್ಟು ಕಸ ಎತ್ತುವ ವಾಹನಗಳನ್ನು ಬಳಸಲಾಗುತ್ತಿದೆ; (ತಾಲ್ಲೂಕುವಾರು ವಿವರ ನೀಡುವುದು) ಎಷ್ಟು ವಾಹನಗಳನ್ನು ಹೊಸದಾಗಿ ಖರೀದಿಸಲಾಗಿದೆ; ಈ ವಾಹನಗಳನ್ನು ಬೆಲೆ ಎಷ್ಟು; ಬಾಕಿ ಇರುವ ಪಂಚಾಯತ್ ಗಳಿಗೆ ಯಾವ ಕಾಲಮಿತಿಯಲ್ಲಿ ಕಸ ಎತ್ತುವ ವಾಹನಗಳನ್ನು ಒದಗಿಸಲಾಗುವುದು; | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 196 ಸ್ವಚ್ಛ ವಾಹಿನಿಗಳನ್ನು ತ್ಯಾಜ್ಯ ನಿರ್ವಹಣೆಗಾಗಿ ಬಳಸಲಾಗುತ್ತಿದೆ. ಈ ಪೈಕಿ 116 ವಾಹನಗಳನ್ನು ಹೊಸದಾಗಿ ಖರೀದಿಸಲಾಗಿದೆ. ಈ ವಾಹನಗಳ ಬೆಲೆ ರೂ. 6.00 ಲಕ್ಷದಿಂದ ರೂ.12.00 ಲಕ್ಷದವರೆಗೆ ಇದ್ದು, ಕುಟುಂಬಗಳ ಸಂಖ್ಯೆಗೆ ಅನುಗುಣವಾಗಿ ಗ್ರಾಮ ಪಂಚಾಯಿತಗಳು ವಾಹನಗಳನ್ನು ಖರೀದಿಸಿರುತ್ತವೆ.<br>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 23 ಗ್ರಾಮ ಪಂಚಾಯತ್ ಗಳಲ್ಲಿ ವಾಹನಗಳನ್ನು ಖರೀದಿಸಲು ಬಾಕಿಯಿದ್ದು, ಈ ಗ್ರಾಮ ಪಂಚಾಯಿತಿಗಳಲ್ಲಿ ಪ್ರಸ್ತುತ ಬಹುಗ್ರಾಮ ಕ್ಲಸ್ಟರ್ ಮಾದರಿಯಲ್ಲಿ ಮೂಲ ಗ್ರಾಮ ಪಂಚಾಯಿತಿಗಳ ವಾಹನ ಬಳಸಿಕೊಂಡು ತ್ಯಾಜ್ಯ ಸಂಗ್ರಹಣೆ ಮಾಡಲಾಗುತ್ತಿದೆ.<br>ಉಡುಪಿ ಜಿಲ್ಲೆಯಲ್ಲಿ 149 ಸ್ವಚ್ಛ ವಾಹಿನಿಗಳನ್ನು ತ್ಯಾಜ್ಯ ನಿರ್ವಹಣೆಗಾಗಿ ಬಳಸಲಾಗುತ್ತಿದೆ. ಈ ಎಲ್ಲಾ ವಾಹನಗಳನ್ನು ಹೊಸದಾಗಿ ಖರೀದಿಸಲಾಗಿದೆ. ಈ ವಾಹನಗಳ ಬೆಲೆ ರೂ.4.50 ಲಕ್ಷದಿಂದ ರೂ.12.00 ಲಕ್ಷದವರೆಗೆ ಇದ್ದು, ಕುಟುಂಬಗಳ ಸಂಖ್ಯೆಗೆ ಅನುಗುಣವಾಗಿ ಗ್ರಾಮ ಪಂಚಾಯಿತಗಳು ವಾಹನಗಳನ್ನು ಖರೀದಿಸಿರುತ್ತವೆ.<br>ಉಡುಪಿ ಜಿಲ್ಲೆಯಲ್ಲಿ 20 ಗ್ರಾಮ ಪಂಚಾಯಿತಿಗಳಲ್ಲಿ ವಾಹನಗಳನ್ನು ಖರೀದಿಸಲು ಬಾಕಿಯಿದ್ದು, ಈ ಗ್ರಾಮ ಪಂಚಾಯಿತಿಗಳಲ್ಲಿ ಪ್ರಸ್ತುತ ಬಹುಗ್ರಾಮ ಕ್ಲಸ್ಟರ್ ಮಾದರಿಯಲ್ಲಿ ಮೂಲ ಗ್ರಾಮ ಪಂಚಾಯಿತಿಗಳ ವಾಹನ ಬಳಸಿಕೊಂಡು ತ್ಯಾಜ್ಯ ಸಂಗ್ರಹಣೆ ಮಾಡಲಾಗುತ್ತಿದೆ.<br>**(ತಾಲ್ಲೂಕುವಾರು ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ.)** |

<table>
<tr>
<td>(ಇ)</td>
<td>ಸದರಿ ಜಿಲ್ಲೆಗಳಲ್ಲಿ ಯಾವೆಲ್ಲ ಪಂಚಾಯತ್ ಗಳಲ್ಲಿ ಘನ ತ್ಯಾಜ್ಯ ನಿರ್ವಹಣಾ ಘಟಕಗಳನ್ನು ಸ್ಥಾಪಿಸಲಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು) ಸದರಿ ಘಟಕಗಳ ನಿರ್ಮಾಣಕ್ಕೆ ಎಷ್ಟು ಅನುದಾನವನ್ನು ಖರ್ಚು ಮಾಡಲಾಗಿದೆ; ಎಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ನಿರ್ವಹಣಾ ಘಟಕ ಸ್ಥಾಪಿಸುವ ಯೋಜನೆ ರೂಪಿಸಲಾಗಿದೆಯೇ;</td>
<td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಘನ ತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿಗೆ 158 ಗ್ರಾಮ ಪಂಚಾಯಿತಿಗಳಲ್ಲಿ ಹೊಸ ಕಟ್ಟಡಗಳನ್ನು ಹಾಗೂ 55 ಗ್ರಾಮ ಪಂಚಾಯಿತಿಗಳಲ್ಲಿ ಹಳೆಯ ಕಟ್ಟಡಗಳನ್ನು ಬಳಸಿಕೊಂಡು ಘನ ತ್ಯಾಜ್ಯ ಘಟಕಗಳನ್ನು ನಿರ್ವಹಿಸಲಾಗುತ್ತಿದೆ. ಒಟ್ಟಾರೆ ರೂ.2127.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಬಾಕಿ 10 ಗ್ರಾಮ ಪಂಚಾಯಿತಿಗಳಲ್ಲಿ ಘನ ತ್ಯಾಜ್ಯ ನಿರ್ವಹಣಾ ಘಟಕಗಳನ್ನು ಅವಶ್ಯಕತೆಗೆ ಅನುಗುಣವಾಗಿ ನಿರ್ಮಿಸಲು ಕ್ರಮವಹಿಸಲಾಗುತ್ತಿದೆ.<br><br>ಉಡುಪಿ ಜಿಲ್ಲೆಯಲ್ಲಿ ಘನ ತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿಗೆ 108 ಗ್ರಾಮ ಪಂಚಾಯಿತಿಗಳಲ್ಲಿ ಹೊಸ ಕಟ್ಟಡಗಳನ್ನು ನಿರ್ಮಿಸಿ ನಿರ್ವಹಣೆ ಮಾಡಲಾಗುತ್ತಿದೆ. ಹಾಗೂ 21 ಗ್ರಾಮ ಪಂಚಾಯಿತಿಗಳಲ್ಲಿ ಹಳೆಯ ಕಟ್ಟಡಗಳನ್ನು ಬಳಸಿಕೊಂಡು ಘಟಕಗಳನ್ನು ನಿರ್ವಹಣೆ ಮಾಡಲಾಗುತ್ತಿದೆ.<br>26 ಗ್ರಾಮ ಪಂಚಾಯಿತಿಗಳಲ್ಲಿ ಬಹುಗ್ರಾಮ ಕ್ಲಸ್ಟರ್ ಮಾದರಿಯಲ್ಲಿ ತ್ಯಾಜ್ಯ ಸಂಗ್ರಹಣೆ ಮತ್ತು ನಿರ್ವಹಣೆ ಮಾಡಲಾಗುತ್ತಿದೆ. ಒಟ್ಟಾರೆ ರೂ.766.73 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.<br>(ತಾಲ್ಲೂಕುವಾರು ವಿವರವನ್ನು ಅನುಬಂಧ-2ರಲ್ಲಿ ನೀಡಲಾಗಿದೆ.)</td>
</tr>
<tr>
<td>(ಈ)</td>
<td>ಒಂದು ಘನ ತ್ಯಾಜ್ಯ ನಿರ್ವಹಣಾ ಘಟಕ ಸ್ಥಾಪಿಸಲು ತಗಲುವ ವೆಚ್ಚವೆಷ್ಟು?</td>
<td>ಗ್ರಾಮ ಪಂಚಾಯಿತಿಗಳಲ್ಲಿ ಕುಟುಂಬಗಳು ತ್ಯಾಜ್ಯ ಪರಿಮಾಣಕ್ಕೆ ಅನುಗುಣವಾಗಿ ಹಾಗೂ ವಿಸ್ತೀರ್ಣಕ್ಕೆ ಅನುಗುಣವಾಗಿ ಘನ ತ್ಯಾಜ್ಯ ನಿರ್ವಹಣಾ ಘಟಕ ನಿರ್ಮಿಸಲು ಯೋಜನೆ ಮತ್ತು ಅಂದಾಜು ಮೊತ್ತವನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.<br><table>
<tr><th>ವಿಸ್ತೀರ್ಣ (Sq. Ft)</th><th>ವೆಚ್ಚ ರೂ. ಲಕ್ಷಗಳಲ್ಲಿ</th></tr>
<tr><td>1080</td><td>9.00</td></tr>
<tr><td>1650</td><td>11.82</td></tr>
<tr><td>2400</td><td>15.15</td></tr>
<tr><td>3300</td><td>20.00</td></tr>
</table></td>
</tr>
<tr>
<td></td>
<td>ಕಳೆದ 2 ವರ್ಷಗಳಲ್ಲಿ ಸದರಿ ಜಿಲ್ಲೆಗಳಿಗೆ ಈ ಯೋಜನೆಯಡಿಯಲ್ಲಿ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು)</td>
<td>ಕಳೆದ 2 ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ರೂ.272.31ಲಕ್ಷಗಳನ್ನು ಹಾಗೂ ಉಡುಪಿ ಜಿಲ್ಲೆಗೆ ರೂ.712.67 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.<br>(ತಾಲ್ಲೂಕುವಾರು ವಿವರವನ್ನು ಅನುಬಂಧ-3ರಲ್ಲಿ ನೀಡಲಾಗಿದೆ.)</td>
</tr>
</table>

**(ಪ್ರಿಯಾಂಕ್ ಖರ್ಗೆ)**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

## ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ- 1598ರ ಲಗತ್ತು

## ಅನುಬಂಧ-1

| ದಕ್ಷಿಣ ಕನ್ನಡ ಜಿಲ್ಲೆ | | |
|---|---|---|
| ಕ್ರ. ಸಂ | ತಾಲ್ಲೂಕು | ಕಸ ಎತ್ತುವ ವಾಹನಗಳ ಸಂಖ್ಯೆ |
| 1 | ಬಂಟ್ವಾಳ | 48 |
| 2 | ಬೆಳ್ತಂಗಡಿ | 34 |
| 3 | ಮಂಗಳೂರು | 20 |
| 4 | ಮೂಡಬಿದ್ರೆ | 12 |
| 5 | ಮುಲ್ಕಿ | 7 |
| 6 | ಉಳ್ಳಾಲ | 16 |
| 7 | ಕಡಬ | 19 |
| 8 | ಪುತ್ತೂರು | 22 |
| 9 | ಸುಳ್ಯ | 18 |
| | **ಒಟ್ಟು** | **196** |

| ಉಡುಪಿ ಜಿಲ್ಲೆ | | |
|---|---|---|
| ಕ್ರ. ಸಂ | ತಾಲ್ಲೂಕು | ಕಸ ಎತ್ತುವ ವಾಹನಗಳ ಸಂಖ್ಯೆ |
| 1 | ಉಡುಪಿ | 19 |
| 2 | ಕಾಪು | 22 |
| 3 | ಬ್ರಹ್ಮಾವರ | 27 |
| 4 | ಕುಂದಾಪುರ | 31 |
| 5 | ಬೈಂದೂರು | 14 |
| 6 | ಹೆಬ್ರಿ | 6 |
| 7 | ಕಾರ್ಕಳ | 30 |
| | **ಒಟ್ಟು** | **149** |

## ಅನುಬಂಧ - 2

### ಘನ ತ್ಯಾಜ್ಯ ನಿರ್ವಹಣಾ ಘಟಕಗಳ ವಿವರ

| ದಕ್ಷಿಣ ಕನ್ನಡ ಜಿಲ್ಲೆ | | | |
|---|---|---|---|
| ಕ್ರ. ಸಂ | ತಾಲ್ಲೂಕು | ನೂತನ ಘಟಕಗಳು | ಹಳೆಯ ಘಟಕಗಳು |
| 1 | ಬಂಟ್ವಾಳ | 39 | 11 |
| 2 | ಬೆಳ್ತಂಗಡಿ | 44 | 4 |
| 3 | ಮಂಗಳೂರು | 15 | 4 |
| 4 | ಮೂಡಬಿದ್ರೆ | 9 | 1 |
| 5 | ಮುಲ್ಕಿ | 6 | 1 |
| 6 | ಉಳ್ಳಾಲ | 7 | 5 |
| 7 | ಕಡಬ | 11 | 10 |
| 8 | ಪುತ್ತೂರು | 17 | 4 |
| 9 | ಸುಳ್ಯ | 10 | 15 |
| | **ಒಟ್ಟು** | **158** | **55** |

| ಉಡುಪಿ ಜಿಲ್ಲೆ | | | |
|---|---|---|---|
| ಕ್ರ. ಸಂ | ತಾಲ್ಲೂಕು | ನೂತನ ಘಟಕಗಳು | ಹಳೆಯ ಘಟಕಗಳು |
| 1 | ಉಡುಪಿ | 11 | 5 |
| 2 | ಕಾಪು | 15 | 1 |
| 3 | ಬ್ರಹ್ಮಾವರ | 18 | 7 |
| 4 | ಕುಂದಾಪುರ | 25 | 2 |
| 5 | ಬೈಂದೂರು | 10 | 2 |
| 6 | ಹೆಬ್ರಿ | 6 | 0 |
| 7 | ಕಾರ್ಕಳ | 23 | 4 |
| | **ಒಟ್ಟು** | **108** | **21** |

# ಅನುಬಂಧ-3

| ದಕ್ಷಿಣ ಕನ್ನಡ ಜಿಲ್ಲೆ | | |
|---|---|---|
| ಕ್ರ.ಸಂ | ತಾಲೂಕು | ಅನುದಾನ ಬಿಡುಗಡೆ (ರೂ.ಲಕ್ಷಗಳಲ್ಲಿ) |
| 1. | ಬಂಟ್ವಾಳ | 20.95 |
| 2. | ಬೆಳ್ತಂಗಡಿ | 52.39 |
| 3. | ಮಂಗಳೂರು | 8.08 |
| 4. | ಮೂಡಬಿದ್ರೆ | 28.93 |
| 5. | ಮುಲ್ಕಿ | 6.52 |
| 6. | ಉಳ್ಳಾಲ | 37.96 |
| 7. | ಕಡಬ | 40.94 |
| 8. | ಪುತ್ತೂರು | 23.05 |
| 9. | ಸುಳ್ಯ | 53.49 |
| | **ಒಟ್ಟು** | **272.31** |

| ಉಡುಪಿ ಜಿಲ್ಲೆ | | |
|---|---|---|
| ಕ್ರ. ಸಂ | ತಾಲೂಕು | ಅನುದಾನ ಬಿಡುಗಡೆ (ರೂ.ಲಕ್ಷಗಳಲ್ಲಿ) |
| 1 | ಉಡುಪಿ | 106.89 |
| 2 | ಕಾಪು | 67.08 |
| 3 | ಬ್ರಹ್ಮಾವರ | 131.55 |
| 4 | ಕುಂದಾಪುರ | 133.49 |
| 5 | ಬೈಂದೂರು | 96.46 |
| 6 | ಹೆಬ್ರಿ | 98.42 |
| 7 | ಕಾರ್ಕಳ | 78.78 |
| | **ಒಟ್ಟು** | **712.67** |

ಉಪ ಕಾರ್ಯದರ್ಶಿ (ಅಭಿವೃದ್ಧಿ)
ಗ್ರಾ.ಕು.ನೀ& ನೈರ್ಮಲ್ಯ ಇಲಾಖೆ